ಇವಳೇ ಈಗಲೂ ಭದ್ರಾ ಕಾನನದ ಹೆಸರಾಂತ ರಾಣಿ. ಆಕೆ ಸಂತೋಷದಿಂದ ಹುಲ್ಲಮೇಲೆ ಉರುಳಾಡಿದ್ದು ಎಂದು ನಾನು ಭಾವಿಸಿದ್ದು ತಪ್ಪಾಗಿತ್ತು. ತೆಗೆದ ಚಿತ್ರಗಳ ಸೂಕ್ಷ್ಮವಾಗಿ ನೋಡಿದಾಗ ಅದರ ಬಾಲದ ಮೇಲ್ಭಾಗದಲ್ಲಿ ಆಳದ ಗಾಯವಿರುವುದು ಕಂಡು ಬಂತು. ಆಕೆ ಅಷ್ಟೊಂದು ಒದ್ದಾಡಿ ಹೊರಳಾಡಿದ್ದು ಈ ಗಾಯದ ನೋವಿನ ಕಾರಣಕ್ಕೆ ಇರಬೇಕು. ಜೊತೆಗೆ ನೊಣಗಳು ಆಕೆಗೆ ವಿಪರೀತ ಕಾಟ ಕೊಡುತ್ತಿದ್ದವು. ಬಾಲದಿಂದ ಬಡಿದು ನೊಣಗಳ ಓಡಿಸುತ್ತಾ ಆಗಾಗ ತನ್ನ ಗಾಯವನ್ನು ಕಷ್ಟಬಿದ್ದು ನಾಲಿಗೆಯಿಂದ ನೆಕ್ಕುತ್ತಿದ್ದಳು.

ಇದಾದ ಮೇಲೆ ನಾನು ರಾಣಿಯನ್ನು ಅನೇಕ ಸಲ ನೋಡಿದ್ದೇನೆ. ಆಕೆ ಬೇಟೆಯಾಡುವ ಶೈಲಿ, ತನ್ನ ಮಕ್ಕಳನ್ನು ಕಾಪಾಡಲು ಹೆಣಗುವ ಕಷ್ಟ ಎಲ್ಲವನ್ನೂ ಗಮನಿಸಿದ್ದೇನೆ. ವ್ಯಾಘ್ರಗಳಲ್ಲಿ ಹೆಣ್ಣು ಹುಲಿಯ ಜೀವನ ನನಗೆ ತಿಳಿದ ಮಟ್ಟಿಗೆ ಬಲು ಘನಘೋರವಾಗಿರುತ್ತದೆ. ಗಂಡು ಹುಲಿಯಿಂದ ತನ್ನ ಮರಿಗಳ ಪ್ರಾಣ ರಕ್ಷಣೆ ಮಾಡಿಕೊಳ್ಳುವ ಸವಾಲು ಇದರಲ್ಲಿ ಬಲು ದೊಡ್ಡದು. ಮರಿಗಳಿಗಾಗಿ ಬೇಟೆಯಾಡುವ, ದಿನವೂ ಅವುಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವ ಕಸರತ್ತು ಬಲು ಕಷ್ಟದ್ದು. ಈ ವಿಷಯದಲ್ಲಿ ರಾಣಿ ಬಲು ಚುರುಕು ಮತ್ತು ಚಾಣಾಕ್ಷೆ.

ಒಮ್ಮೆ ದಾರಿಯಲ್ಲಿ ಕಾಡುಕೋಣಗಳು ಮೇಯುತ್ತಿದ್ದವು. ಗುಂಪಿನ ಹಿರಿಯ ಕೋಣ ಯಾವುದೋ ಅಪಾಯದ ವಾಸನೆ ಹಿಡಿದು ಗುರುಗುರು ಎಂದು ಸದ್ದು ಮಾಡುತ್ತಿತ್ತು. ಗುಂಪಿನಲ್ಲಿ ಸಣ್ಣ ಮರಿಗಳು ಇದ್ದವು. ಅವುಗಳ ಹೆದರಿಕೆಯ ವರ್ತನೆ ಗಮನಿಸುತ್ತಿದ್ದ ನಾನು ನೇರವಾಗಿ ಮುಂದೆ ನೋಡುತ್ತಿದ್ದೆ. ಆಗ ನನ್ನ ಮತ್ತೊಂದು ಬದಿಗೆ ಕೂತಿದ್ದ ತರುಣನು ಹೆದರಿ ಗಂಟಲು ಒಣಗಿಸಿಕೊಂಡು ಸಣ್ಣ ದನಿಯಲ್ಲಿ, 'ಸರ್ ಹುಲಿ... ಹುಲಿ...' ಎಂದು ತಿವಿದ. ಆತ ಕೈ ತೋರಿಸುತ್ತಿದ್ದ ದಿಕ್ಕು ನನ್ನ ಬಲಬಾಗಕ್ಕೆ ಇತ್ತು. ಸಡನ್ನಾಗಿ ನಾನು ತಿರುಗಿ ನೋಡಿದರೆ ರಾಣಿ ನನಗೆ ಕೇವಲ ಹನ್ನೆರಡು ಅಡಿ ದೂರದಲ್ಲಿ ಅಡಗಿ ಕೂತಿದ್ದಳು. ನಮ್ಮತ್ತಲೇ ದುರುದುರು ಗುರಾಯಿಸುತ್ತಿದ್ದಳು. ಒಮ್ಮೆಲೇ ಕೈಕಾಲು ಜೋಮು ಹಿಡಿದಂತಾಯಿತು. ತಲೆಯೊಳಗೆ ಬಿಸಿ ರಕ್ತ ಸಂಚರಿಸಿದಂತಾಗಿ ನಾಲಿಗೆ ಒಣಗಿತು. ಕ್ಯಾಮೆರಾ ಎತ್ತಿ ಪಟ ತೆಗೆಯಲು ಆಕೆ ತೀರಾ ಸನಿಹದಲ್ಲೇ ಇದ್ದಳು. ಆಗಿದ್ದಾಗಲಿ ಎಂದು ಅವಳ ಮುಖವನ್ನಷ್ಟೇ ತೆಗೆದೆ. ನಂತರ ಅವಳ ಗಮನ ಕಾಡುಕೋಣಗಳ ಮೇಲಿತ್ತು. ಅವಳೇನೋ ಭಾರಿ ಉಪಾಯ ಮಾಡಿಕೊಂಡಂತೆ ಕಾಣುತ್ತಿತ್ತು. ನೋಡು ನೋಡುತ್ತಲೇ ತೆವಳುತ್ತಾ ಹೊರಟ ಆಕೆ ಕಾಡುಕೋಣಗಳು ನಿಂತಿದ್ದ ಜಾಗದ ವಿರುದ್ಧ ದಿಕ್ಕಿಗೆ ಹೋದಳು. ನಿಧಾನಕ್ಕೆ ನಡೆಯುತ್ತಾ ತನ್ನ ಸುಳಿವು ಅವುಗಳಿಗೆ ಸಿಗದಂತೆ ಒಮ್ಮೆಲೆ ಕಾಣೆಯಾದಳೇನೋ ಎಂದು ಭ್ರಮೆ ಹುಟ್ಟಿಸುವಂತೆ ಮುಂದಿನ ಪೊದೆ ಸೇರಿದಳು. ಕಾಡುಕೋಣಗಳ ಬೆನ್ನ ಹಿಂದಿನಿಂದ ಹಾರಿ

